**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಸಿದ್ದಾಪುರ**

ಸಿ.ಸಿ. 794/2023

| | |
|---|---|
| ಸಿ.ಡಬ್ಲ್ಯೂಃ | 8 |
| ಪಿ.ಡಬ್ಲ್ಯೂಃ | 7 |

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | ಡಾಃಶ್ರೇಯಸ್ ಪಂಡಿತ್ |
| ತಂದೆ ಹೆಸರು | ಃ | ವಿನೋದ ಪಂಡಿತ್ |
| ವಯಸ್ಸು | ಃ | 26 ವರ್ಷ |
| ವೃತ್ತಿ | ಃ | ವಿದ್ಯಾರ್ಥಿ |
| ವಾಸ | ಃ | ವಿಜಯಪುರ |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 02-07-2026**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ**

ನಾನು ಜೂನ್ -2023 ರಿಂದ ಫೆಬ್ರವರಿ -2026 ವರೆಗೆ ಸಿದ್ದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂದಿಸಿದಂತೆ ದಿಃ 19-08-2023 ರಂದು 92 ವರ್ಷಯ ವಯಸ್ಸಿನ ಕೃಷ್ಣಪ್ಪ ಹೆಗಡೆ ಎನ್ನುವವರು ಅವರ ಸಂಬದಿಸಿಕರಾದ ವೀರಭದ್ರ ಕೃಷ್ಣಾ ಹೆಗಡೆ ರವರ ಜೊತೆ ನಮ್ಮ ಆಸ್ಪತ್ರೆಗೆ ಮದ್ಯಾಹ್ನ 1-30 ಗಂಟೆ ಸಮಯಕ್ಕೆ ಹಲ್ಲೆಯ ಹಿನ್ನಲೆಯಲ್ಲಿ ಗಾಯಗೊಂಡು ಚಿಕಿತ್ಸೆಗಾಗಿ ಬಂದಿರುತ್ತಾರೆ. ಅವರನ್ನು ಪರಿಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

ಹಣೆಯ ಮೇಲೆ ಹಾಗೂ ತಲೆಯ ಮೇಲೆ 1cm x 1cm x 0.5 cm ಉದ್ದ ಹಾಗೂ ಅಗಲದ ಹಾಗೂ ಆಳವಾದ ಗಾಯ ಕಂಡುಬಂದಿರುತ್ತದೆ.

ನಂತರ ಅವರಿಗೆ ಪ್ರಥಮ ಚಿಕಿತ್ಸೆಯನ್ನು ನೀಡಿರುತ್ತೇನೆ.

ಈ ಬಗ್ಗೆ ದಿಃ 14-10-2023 ರಂದು ನಾನು ಚಾಸಾ-4 ರವರ ಗಾಯದ ಪ್ರಮಾಣಪತ್ರವನ್ನು ನೀಡಿರುತ್ತೆನೆ. ಸಾಕ್ಷಿಗೆ ಈಗ ಗಾಯಪ್ರಮಾಣದ ಪತ್ರವನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ -14 ಎಂದು , ಸಾಕ್ಷಿಯ ಸಹಿಯನ್ನು ನಿ.ಪಿ-14(ಬಿ) ಎಂದು ಗುರುತಿಸಲಾಯಿತು.

ಈ ಮೇಲ್ಕಂಡ ಗಾಯಗಳು ನನ್ನ ಅಭಿಪ್ರಾಯದಲ್ಲಿ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ. ಈ ಮೇಲ್ಕಂಡ ಗಾಯವು ಒಬ್ಬ ವ್ಯಕ್ತಿಯು ಮೊತ್ತೊಬ್ಬ ವ್ಯಕ್ತಿಗೆ ಛತ್ರಿಯಿಂದ ಹೊಡೆದಾಗ ನನ್ನ ಗಾಯದ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ಗಾಯಗಳು ಆಗುವ ಸಂಭವ ಇರುತ್ತದೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಚಿಕಿತ್ಸೆ ನೀಡಿದ ನಂತರ ನಾನು ಸಿದ್ದಾಪುರ ಪೋಲೀಸ ಠಾಣೆಗೆ ನಾನು ಮಾಹಿತಿ ನೀಡಿರುತ್ತೇನೆ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಸಂಕದ ಮೇಲೆ ಓಡಾಡುವಾಗ ಕೆಳಗೆ ಬಿದ್ದಾಗ ನನ್ನ ಗಾಯದ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತಹ ಗಾಯಗಳು ಆಗುವ ಸಂಭವ ಇರುತ್ತದೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಆಗಬಹುದು ಎಂದು ನುಡಿಯುತ್ತಾರೆ .

ಚಾಸಾ-4 ರವರು ತಮ್ಮ ಸ್ವಂತ ವಾಹನದಲ್ಲಿ ಬಂದಿರುತ್ತಾರೆ. ಸದರಿ ವಿಷಯವನ್ನು ನಮ್ಮ ಆಸ್ಪತ್ರೆಯ ಎಂ ಎನ್ ಸಿ ರೆಜಿಸ್ಟರ್ ನಲ್ಲಿ ನಮೂದು ಮಾಡಿರುತ್ತೇನೆ. ಸಾಮಾನ್ಯವಾಗಿ ಆಂಬ್ಯೂಲೆನ್ಸನಲ್ಲಿ ಒಬ್ಬ ವ್ಯಕ್ತಿ ಚಿಕಿತ್ಸೆಗಾಗಿ ಬಂದರೆ ಅದನ್ನೂ ಸಹ ನಿಮ್ಮ ರೆಜಿಸ್ಟರ್ ನಲ್ಲಿ ನಮೂದು ಮಾಡುತ್ತೀರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ಕ್ಯಾದಗಿಯಲ್ಲಿ ಸರ್ಕಾರಿ ಆಸ್ಪತ್ರೆ ಇರುತ್ತದೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

( ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಸ.ಒ

ಸಹಿ ಇದೆ.
ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಸಿದ್ದಾಪುರ